ಕಡತಗಳನ್ನು ಪರಿಶೀಲನೆ ಮಾಡಿ ಅದೇರೀತಿ ಈಗಲೂ ಕೊಟ್ಟರೆ ಶ್ರೀ ಶಂಕರ್ ಅವರು ಹೇಳಿದ ಹಾಗೆ ಮಂಡಲ ಪಂಚಾಯತಿಗಳಿಗೆ ಅನುಕೂಲವಾಗುತ್ತದೆ. ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಜಿ. ಎಸ್. ಬಾಗಲ ಕೋಟ್. ಮಾನ್ಯ ಸದಸ್ಯರ ಸೂಚನೆಯನ್ನು ನಾನು ಪರಿಶೀಲನೆ ಮಾಡುತ್ತೇನೆ.

ಕಾರ್ಖಾನೆಗಳಿಂದ ಪರಿಸರ ಮಾಲಿನ್ಯ

೮೮೯. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್) —ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ''ಪರಿಸರ ಮಾಲಿನ್ಯ'' ಗೊಳಿಸುತ್ತಿರುವ ಕೈಗಾರಿಕೆಗಳು ಯಾವುವು ?

ಆ) ಪರಿಸರ ಮಾಲಿನ್ಯ ನಿಯಂತ್ರಿಸಲು ರಾಜ್ಯ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಎಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು). —

ಅ) ಸಾಮಾನ್ಯವಾಗಿ ರಾಜ್ಯದ ಎಲ್ಲ ಕೈಗಾರಿಕೆಗಳು ಒಂದಿಲ್ಲೊಂದು ರೀತಿಯಲ್ಲಿ ಪರಿಸರವನ್ನು ಮಲಿನಗೊಳಿಸುತ್ತಿವೆ. ಆದರಲ್ಲೂ ಮುಖ್ಯವಾಗಿ ಸಕ್ಕರೆ, ಡಿಸ್ಟಿಲರೀ, ಕಾಗದ ರಸಾಯನಿಕ ವಸ್ತುಗಳು, ಗೊಬ್ಬರ, ಸಿಮೆಂಟ್, ಡೈರಿ ಮುಂತಾದ ಬೃಹತ್ ಕೈಗಾರಿಕೆಗಳು ಜಲ ಮತ್ತು ವಾಯುವನ್ನು ಮಲಿನಗೊಳಿಸುತ್ತವೆ.

ಆ) ರಾಜ್ಯ ಸರ್ಕಾರವು ರಾಜ್ಯದಲ್ಲಿ ವಾಯು ಮತ್ತು ಜಲ ಮಾಲಿನ್ಯವನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ೧೯೭೪ರಲ್ಲಿ ರಚಿಸಿತು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯು ಉದ್ದಿಮೆಂ ಮತ್ತು ಪುರಸಭೆಗಳಿಂದ ಹೊರಬರುವ ಕಲುಷಿತ ನೀರು ಮತ್ತು ಧೂಷಿತ ವಾಯುವನ್ನು ಜಲ ಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ೭೪ ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ೮೧ರ ಪ್ರಕಾರ ನಿಯಂತ್ರಿಸುತ್ತಿದೆ.

೧೯೮೧ರಲ್ಲಿ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯು ಪರಿಸರ ಸಂರಕ್ಷಣೆ ಕಾರ್ಯಕ್ಕಾಗಿ ಸ್ಥಾಪನೆಯಾಯಿತು. ಈ ಇಲಾಖೆಯು ಹಂತಹಂತವಾಗಿ ಪರಿಸರ ಸಂರಕ್ಷಣೆ ಕಾರ್ಯವನ್ನು ಕೈಗೊಂಡಿದೆ. ರಾಜ್ಯದಲ್ಲಿ ಸ್ಥಾಪನೆಯಾಗುವ ಎಲ್ಲಾ ಕೈಗಾರಿಕೆಗಳಿಂದಾಗಬಹುದಾದ ಪರಿಸರ ಮಾಲಿನ್ಯ ನಿಯಂತ್ರಣಕ್ಕಾಗಿ ತಜ್ಞರನ್ನೊಳಗೊಂಡ ಪರಿಸರ ವಿಮೋಚನೆ ಸಮಿತಿಯು ರಚನೆಯಾಗಿದೆ.

೧೯೮೬ರಲ್ಲಿ ಪರಿಸರ ರಕ್ಷಣೆ ಕಾಯ್ದೆಯು ಜಾರಿಗೆ ಬಂದಿದ್ದು ಈ ಕಾಯ್ದೆಯನ್ನು ಇಲಾಖೆಯು ಅನುಷ್ಠಾನಗೊಳಿಸುತ್ತಿದೆ. ಪರಿಸರ ಸಂರಕ್ಷಣೆ ಕಾರ್ಯಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕವಾದ ಪ್ರಾಯೋಗಿಕ ಕಾರ್ಯಯೋಜನೆಗಳನ್ನು ಇಲಾಖೆಯು ಕೈಗೊಳ್ಳುತ್ತಿದೆ. ಪರಿಸರ ಸಂರಕ್ಷಣೆ ಪರಿಸರ ಸಮತೋಲನ, ಪರಿಸರ ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ–ಈ ಕಾರ್ಯಗಳು ಸಂಕೀರ್ಣ ಹಾಗೂ ಸೂಕ್ಷ್ಮ ವಿಷಯಗಳಾಗಿದ್ದು ಈ ಕಾರ್ಯವು ಅದರ ಬಗೆಗಿನ ಕಾಳಜಿ ತಿಳಿವಳಿಕೆಯನ್ನು ಎಲ್ಲರಲ್ಲಿ ಮೂಡಿಸುವುದರಿಂದ ಮಾತ್ರ ಸಾಧ್ಯವಿದೆ. ಸರ್ಕಾರವು ಈ ದಿಶೆಯಲ್ಲಿ ಪ್ರಯತ್ನವನ್ನು ಮಾಡುತ್ತಿದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬಹಳ ಚಾಣಾಕ್ಷತನದಿಂದ, ಒಂದು ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ. ಮೊದಲನೇ ಪ್ರಶ್ನೆಗೆ ಹೇಳುತ್ತಿದ್ದಾರೆ, ಸಂಪೂರ್ಣವಾಗಿ ಎಲ್ಲಾ ಕೈಗಾರಿಕೆಗಳು ಒಂದಲ್ಲ, ಒಂದುರೀತಿಯಿಂದ ಪರಿಸರವನ್ನು ಮಲಿನಗೊಳಿಸುತ್ತಿವೆ ಎಂದು ಹೇಳಿದ್ದಾರೆ. ಆದರೆ ಇದನ್ನು ಯಶಸ್ವಿಯಾಗಿ ತಡೆಗಟ್ಟುವುದರಲ್ಲಿ ಸರ್ಕಾರ ಯಾವ ಕಾರ್ಯಕ್ರಮ ಹಾಕಿದೆ, ಅದನ್ನು ತಿಳಿಸಿಲ್ಲ, ಅದೇರೀತಿ ಯಾವ ಯಾವ ಭಾರಿ ಉದ್ದಿಮೆಗಳು ಇವೆ, ಈ ಉದ್ದಿಮೆಗಳು ಪರಿಸರ ಮಲಿನ ಮಾಡುತ್ತಾ ಬಂದಿವೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಮಂಗಳೂರು ರಸಗೊಬ್ಬರ ಕಾರ್ಖಾನೆ ಸೆಕ್ಟಾರ್‌ನಲ್ಲಿ ನಡೆಯುತ್ತಿದೆ. ಈ ಕಾರ್ಖಾನೆ ಬಗ್ಗೆ ಕರ್ನಾಟಕ

ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ರಿಪೋರ್ಟ್ ಪ್ರಕಾರ, ಇದರಲ್ಲಿ ಬರುವಂತಹ ಮಲೀನ ನೀರನ್ನು, ಸುಮಾರು ೨ ಕಿಲೋಮೀಟರ್ ದೂರಕ್ಕೆ ಸಮುದ್ರಕ್ಕೆ ಬಿಡಬಹುದು ಎಂದೂ ಶಿಫಾರಸ್ ಮಾಡಿದೆ. ಆದರೆ ಇಷ್ಟರವರೆಗೆ ಯಾವ ಒಂದು ಕಾರ್ಯಕ್ರಮವೂ ಈ ಬಗ್ಗೆ ಆಗಿಲ್ಲ. ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ವಿಚಾರದಲ್ಲಿ ತಮಗೂ ಬಹಳ ಅನುಭವ ಇದೆ. ತಾವು ಎಷ್ಟೋ ಸಲ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದೀರಿ. ಅಲ್ಲಿ ಬಿಸ್ತರ ದಿನದ ಸಂಪಾದನೆ ಸಂಪೂರ್ಣವಾಗಿ ಮೀನಂ ಹಿಡಿಯುವುದರಿಂದ. ಆದರೆ ಇಪತ್ತು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಸಂಪೂರ್ಣವಾಗಿ ಮೀನು ಇಲ್ಲದಂತಾಗಿದೆ. ಮಾನ್ಯ ರಘುಪತಿಯವರಿಗೂ ಈ ವಿಚಾರದಲ್ಲಿ ಅನುಭವ ಆಗಿದೆ ಇದಕ್ಕೋಸ್ಕರ ಸರ್ಕಾರ ಯಾವ ಕಾರ್ಯಕ್ರಮ ಹಾಕಿದೆ.

ಅಧ್ಯಕ್ಷರು.—ತಾವು ನೇರವಾಗಿ ಪ್ರಶ್ನೆ ಕೇಳಿ. ಏನು ಆಗಬೇಕೆಂಬುದನ್ನು ಮಾತ್ರ ಕೇಳಿ ?

ಶ್ರೀ ಎನ್. ಎಂ. ಅಡ್ಯಂತಾಯ್ಯ.—ಹರಿಹರ ಫಾಲಿ ಫೈಬರ್ಸ್ ಮತ್ತು ಗ್ವಾಲಿಯರ್ ರೇಯಾನ್ಸ್ ಈ ಎರಡು ಕೈಗಾರಿಕೆಗಳು, ೩ ಕೋಟಿ ೩೦ ಲಕ್ಷ ಲೀಟರ್ ಮಲೀನವಾದ ನೀರನ್ನು ಬಿಡುತ್ತಿವೆ. ಇದರಿಂದ ಎರಡು ತಾಲ್ಲೂಕುಗಳಲ್ಲಿ ಇರುವಂಥ ಜನರಿಗೆ ಅನೇಕ ತೊಂದರೆಯುಂಟಾಗುತ್ತಿದೆ. ಮತ್ತು ಈ ಎರಡು ಕಾರ್ಖಾನೆಗಳಿಂದ ಬರತಕ್ಕ ಮಲಿನ ನೀರಿನಲ್ಲಿ ಜಿಂಕ್ ಬರುತ್ತಿದ್ದು, ಇದರಿಂದ ಅನೇಕ ರೋಗಗಳು ಬರುತ್ತಿವೆ. ಇದಕ್ಕಾಗಿ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿದೆ. ಏತಕ್ಕೋಸ್ಕರ ಇದುವರೆಗೆ ಈ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಇವುಗಳಿಗೆ ಸರ್ಕಾರ ೧೯೮೩ರ ವರೆಗೆ ಅನುಮತಿ ಕೊಟ್ಟಿತ್ತು, ಅದಕ್ಕಾಗಿ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಹರಿಹರ ಫಾಲಿ ಫೈಬರ್ಸ್ ಮತ್ತು ಗ್ವಾಲಿಯರ್ ರೇಯಾನ್ಸ್ ಕೈಗಾರಿಕೆಗಳಿಗೆ ಯಾವಾಗ ಲೈಸೆನ್ಸ್ ಕೊಟ್ಟಿದ್ದೀರಿ, ಏಕೆ ಇದುವರೆಗೂ ಮಲಿನತೆಯನ್ನು ತಡೆಹಿಡಿದಿಲ್ಲ. ಅದೇರೀತಿ ಮಂತ್ರಿಗಳು ಮತ್ತೊಂದು ಹೇಳಿದ್ದಾರೆ.

ನಮ್ಮ ರಾಜ್ಯದಲ್ಲಿ ೧೯೮೧ನೇ ಇಸವಿಯಲ್ಲಿ ಪೊಲ್ಯೂಷನ್ ಕಂಟ್ರೋಲ್ ಬೋರ್ಡನ್ನು ಸ್ಥಾಪನೆ ಮಾಡಿದ್ದಾರೆ, ೧೯೮೩ ರಿಂದ ಇಲ್ಲಿಯವರೆಗೆ ಆ ಬೋರ್ಡ್‌ನಲ್ಲಿ ನಾಲ್ಕು ಸಿಟಿಂಗ್ ಮಾತ್ರ ಆಗಿದೆ. ಆದುದರಿಂದ ಈ ಬೋರ್ಡ್ ಏನಿದೆ ಇದು ಪುಸ್ತಕದ ಬದನೆಕಾಯಿ ಆಗಿದೆ. ಆದುದರಿಂದ ಇದನ್ನು ಸಕ್ರೀಯವಾಗಿ ಕೆಲಸ ಮಾಡುವಂತೆ ಕಾರ್ಯರೂಪಕ್ಕೆ ತರಬೇಕು. ಇವರು ಕೇವಲ ಮೂರು ಜನರ ಮೇಲೆ ಕೇಸ್ ಹಾಕಿದ್ದಾರೆ ಬಾಕಿ ಯಾರ ಮೇಲೂ ಇವರು ಏತಕ್ಕೆ ಕೇಸ್ ಹಾಕಲಿಲ್ಲ ?

ಅಧ್ಯಕ್ಷರು,—ಇದು ಭಾಷಣ ಆಯಿತು, ಪ್ರಶ್ನೆ ಆಗಲಿಲ್ಲ. ತಾವು ಡಿಮ್ಯಾಂಡ್ಸ್ ಬಂದಾಗ ಮಾತನಾಡಿ.

ಶ್ರೀ ಜೆ. ಹೆಚ್. ಪಟೇಲ್.—ಹಾಗಾದರೆ ನಾನೂ ಆಗಲೇ ಉತ್ತರ ಹೇಳಿಬಿಡುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದ್ದಾರೋ ನಾನೂ ಇದನ್ನು ಅಷ್ಟೇ ಗಂಭೀರವಾಗಿ ಪರಿಗಣಿಸಿದ್ದೇನೆ, ನಮ್ಮ ಸರಕಾರವೂ ಇದನ್ನು ಗಂಭೀರವಾಗಿ ಪರಿಗಣಿಸಿದೆ ಕಾನೂನು ಪ್ರಕಾರ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಂಡಿದ್ದೇವೆ. ಇದು ಜಗತ್ತಿನಲ್ಲಿರುವ ಜೀವಂತ ಸಮಸ್ಯೆ ಇದು ಬರೀ ನಮ್ಮ ದೇಶದ ಸಮಸ್ಯೆ ಅಲ್ಲ. Industrialisation and pollution go together. ಪೊಲ್ಯೂಷನ್ ಆಗದಿರತಕ್ಕಂಥ ಯಾವುದೇ ದೇಶ ಇಲ್ಲ, ಇದು ಜೀವಿಗಳಿಗೆ ಮಾರಕವಾಗಿದೆಯೇ ಅಥವಾ ಕೇವಲ ತೊಂದರೆಯಾಗುತ್ತದೆಯೇ ಎಂಬುದನ್ನು ನೋಡಬೇಕು. ಸಕ್ಕರೆ ಕಾರ್ಖಾನೆ ಪಕ್ಕದಲ್ಲಿ ವಾಸನೆ ಬರುತ್ತದೆ. ಈ ವಾಸನೆಯನ್ನು ನಿವಾರಣೆ ಮಾಡತಕ್ಕಂಥ ಟೆಕ್ನಾಲಜಿ ಜಗತ್ತಿನಲ್ಲೇ ಎಲ್ಲೂ ಇಲ್ಲ. ಜರ್ಮನಿಯಲ್ಲಿ ಹೋದರೂ ಪೇಪರ್ ಮಿಲ್ ವಾಸನೆ ಬರುತ್ತದೆ. ಇದರಲ್ಲಿ acidit ಅಂಶ ಇದೆಯೇ. ಗ್ಯಾಸಸ್ ಇದೆಯೇ, ಇದರಿಂದ ಪ್ರಾಣಕ್ಕೆ ಅಪಾಯ ಇದೆಯೇ ಎಂಬುದನ್ನು ನೋಡಬೇಕು. ನದಿ ನೀರಿನಲ್ಲಿ effluents ಹೋಗಬೇಕು. ಇಪತ್ತು ನಮ್ಮ ದೇಶದಲ್ಲಿರತಕ್ಕಂಥ ಎಲ್ಲಾ ಮುನಿಸಿಪಾಲಿಟಿಗಳೂ ತಮ್ಮ ಊರಿನ ಕೊಳಚೆ ನೀರನ್ನು ಪಕ್ಕದಲ್ಲಿರುವ ತಕ್ಕಂಥ ನದಿಗಳಿಗೆ ಬಿಡುತ್ತಾರೆ ಇದನ್ನು ನಾವು ಸಾರ್ವತ್ರಿಕವಾಗಿ ಕಂಟ್ರೋಲ್ ಮಾಡಬೇಕೆಂದರೆ ಸಾಧ್ಯವಿಲ್ಲ. ಇದರ ಬಗ್ಗೆ ಕೊನೆಯ ಮಾತನ್ನು ನಾನು ಹೇಳಿದ್ದೇನೆ ಇದರ ಬಗ್ಗೆ ಸರಕಾರವೇ ಎಲ್ಲವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಕಾರ್ಖಾನೆಗಳನ್ನು ಬಂದ್ ಮಾಡಬಹುದು. ಇಪತ್ತು ಆಟೋರಿಕ್ಷಾಗಳು ಬಿಡುವ ಹೊಗೆಯಲ್ಲಿರತಕ್ಕಂಥ ಕಾರ್ಬನ್ ಮೊನಾಕ್ಸೈಡು ಇದೆಯಲ್ಲ. carbon monoxide is more dangerous than the smell is a paper mill. ಅದನ್ನು ಇವತ್ತು ವೈಜ್ಞಾನಿಕವಾಗಿ ಹೇಳಂತ್ತಿದ್ದಾರೆ. ಈ ಪೊಲ್ಯೂಷನ್ ಏನಿದೆ ಇದನ್ನು ಸಂಪೂರ್ಣವಾಗಿ ನಿವಾರಣೆ ಮಾಡುವುದಕ್ಕೆ ಆಗು

ವುದಿಲ್ಲ. But if it is hazardous to life, marine life, human life or even plant life, ಆಗ ನಾವು ಕಾರ್ಖಾನೆಗಳನ್ನು ಬಂದ್ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಕೇಳಿರುವ ಪ್ರಕಾರ ಎಂ. ಸಿ. ಎಫ್ ದನ್ನು ನಾನು ನೋಡುತ್ತೇನೆ. ನಮ್ಮ ಮಂಡಳಿಯ ಹಿಂದಿನ ಆಜ್ಞೆಯ ಪ್ರಕಾರ ಅವರು ನಡೆದುಕೊಳ್ಳದಿದ್ದರೆ, ಆ ರೀತಿ ನಡೆದುಕೊಳ್ಳುವುದಕ್ಕೆ ಅವರಿಗೆ ಡೈರೆಕ್ಷನ್ ಕೊಡುತ್ತೇನೆ ಹರಿಹರ ಪಾಲಿಫೈಬರ್ಸ್ ಮತ್ತು ಗ್ವಾಲಿಯರ್ ರೇಯಾನ್ಸ್ ಬಗ್ಗೆ ನಾನು ಹತ್ತನೆಯ ಸಾರಿ ಉತ್ತರ ಕೊಡುತ್ತಿದ್ದೇನೆ. ನಾನು ಸ್ವಳ ಪರೀಕ್ಷೆ ಮಾಡಿದ್ದೇನೆ. ಅಲ್ಲಿ ವಿಜ್ಞಾನಿಗಳು ಸಾಯುತ್ತಿಲ್ಲ ಆದರೆ ಆ ನೀರಿಗೆ ಬಣ್ಣ ಇದೆ, ಅವರು ಬಿಡತಕ್ಕಂಥ effluents ಗೆ ಕವ್ಪು ಬಣ್ಣ ಇದೆ ಆ ಬಣ್ಣವನ್ನು ಹೋಗಲಾಡಿಸಿ ನೀರನ್ನು ತಿಳಿಗೊಳಿಸತಕ್ಕ ಟೆಕ್ನಾಲಜಿ ಎಲ್ಲೂ ಇಲ್ಲ. ದಷ್ಕಾದಲ್ಲಿ ಏನೋ ಮಾಡಿದ್ದಾರಂತೆ ಮೈಸೂರು ಪೇಪರ್ ಮಿಲ್ ಇದೆ, ಮಂಡ್ಯ ಶುಗರ್ ಫ್ಯಾಕ್ಟರಿ ಇದೆ, ಇವೆಲ್ಲಾ ಸರಕಾರಿ ಕಾರ್ಖಾನೆಗಳು. ಇವುಗಳಿಂದ ಹೋಗತಕ್ಕಂಥ ಕೊಳಚೆ ನೀರು ಹಾನಿಕರವಾಗಿದ್ದರೆ ಅದನ್ನು ನಿಲ್ಲಿಸಬೇಕಾಗುತ್ತದೆ. ಯಾವುದೇ ಕಾರಣದಿಂದ ಜೀವಿಗಳಿಗೆ ಹಾನಿಯಾದರೆ, ತೊಂದರೆಯಾದರೆ ನಿಲ್ಲಿಸಬಹುದು. ಆದರೆ ಏನೋ ಸ್ವಲ್ಪ ವಾಸನೆ ಬರುತ್ತದೆ ಎಂಬ ಕಾರಣಕ್ಕೋಸ್ಕರವೇ ಇಂಡಸ್ಟ್ರಿಗಳನ್ನು ಕ್ಲೋಸ್ ಮಾಡುವುದಕ್ಕೆ ಆಗುವುದಿಲ್ಲ. Our Pollution control board has been acknowledge as the number one in the country according to the Central Pollution Control Board ಅವರ ರಿಪೋರ್ಟೇ ಇದೆ, ಅದನ್ನು ಮಾನ್ಯ ಸದಸ್ಯರು ನೋಡಬಹುದು.

ಶ್ರೀ ಎನ್. ಎಂ. ಅಡ್ಯಂತಾಯ.– ಮಾನ್ಯ ಮಂತ್ರಿಗಳು ಹೇಳಿದ್ದನ್ನು ಕೇಳಿದೆ. ಆದರೆ ಹರಿಹರ ಪಾಲಿಫೈಬರ್ಸ್ ಮತ್ತು ಗ್ವಾಲಿಯರ್ ರೇಯಾನ್ಸ್‌ನಿಂದ ಬರತಕ್ಕ ಮಲಿನವಾದ ನೀರು ಏನು ಇದೆ, ಅದರಲ್ಲಿ ಜಿಂಕ್ ಇದೆ. ಅವರ ರಿಪೋರ್ಟ್ ಪ್ರಕಾರವೇ ಇದೆ. ನಾನು ಅದನ್ನು ಓದುತ್ತೇನೆ. ಮಾನ್ಯ ಮಂತ್ರಿಗಳು ಇಲ್ಲ ಎಂದು ಹೇಳುತ್ತಿದ್ದಾರೆ. ಗ್ವಾಲಿಯರ್ ರೇಯಾನ್ಸ್ ಕಂಪೆನಿ ಕುಮಾರ ಪಟ್ಟಣ ಧಾರವಾಡ ಜಿಲ್ಲೆ ಇವರು sulfuric acid, carbon dioxide ಉತ್ಪಾದಿಸಂತ್ತಾರೆ. ಈ ಕಾರ್ಖಾನೆಯಿಂದ ಪ್ರತಿ ದಿನ ಬರುವ ಮಲಿನ ನೀರಿನ ಪ್ರಮಾಣ ಸುಮಾರು ೧ ಕೋಟಿ ೨೦ ಲಕ್ಷ ಲೀಟರ್, ಈ ಮಲಿನ ನೀರಿನಲ್ಲಿರುವ ಮುಖ್ಯ ಕಲುಷಿತ ಪದಾರ್ಥ ಜಿಂಕ್. ಸರ್ವೇಸಾಮಾನ್ಯವಾಗಿ ಎಲ್ಲಾದರಲ್ಲಿಯೂ ಇದು ಅಪಾಯಕಾರಿ ಎಂದು ಇದೆ. ಮಾನ್ಯ ಸಚಿವರು ರಿಪೋರ್ಟ್ ಬೇಕಾದರೆ ತರಿಸಿ ನೋಡಲಿ. ಇದು ಬಹಳ ಡೇಂಜರಸ್ ಇದು ಸರ್ವವಿಧವಾಗಿ ಎಲ್ಲರಿಗೂ ಗೊತ್ತಿರುವಂತಹ ವಿಷಯ, ಆದುದರಿಂದ ಇದನ್ನು ತಡೆಗಟ್ಟಲು ಏನು ಮಾಡಿದ್ದೀರಿ. ಈಗ ದೊಡ್ಡ ದೊಡ್ಡ ತಿಮಿಂಗಿಲಗಳ ಮೇಲೆ ಏನೂ ಆಕ್ಷನ್ ತೆಗೆದುಕೊಳ್ಳುವುದಿಲ್ಲ, ಸಣ್ಣ ಸಣ್ಣ ವಿಜ್ಞಾನಗಳ ಮೇಲೆ ಸಣ್ಣ ಪುಟ್ಟ ಜನರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೀರಿ. ಆಟೋರಿಕ್ಷಾ ಡ್ರೈವರ್ ಮೇಲೆ ಆಕ್ಷನ್ ತೆಗೆದುಕೊಂಡಿದ್ದೀರಿ, ಅವರು ಮನುಷ್ಯರ ಜನ್ಮವೂ ಸಹ ಮಾಡಿದ್ದಾರೆ. ಏತಕ್ಕೆ ನೀವು ದೊಡ್ಡ ದೊಡ್ಡ ಕಾರ್ಖಾನೆಗಳ ಮೇಲೆ ಆಕ್ಷನ್ ತೆಗೆದುಕೊಳ್ಳುವುದಿಲ್ಲ ಕೇವಲ ಮೂರು ಕಂಪನಿಗಳ ಮೇಲೆ ಅದೂ ಒಂದು ಸಾಫ್ಟ್ ಡ್ರಿಂಕ್ ಕಂಪನಿ, ಎರಡು ಟೆಕ್ಸ್‌ಟೈಲ್ ಮಿಲ್‌ಗಳ ಮೇಲೆ ಆಕ್ಷನ್ ತೆಗೆದುಕೊಂಡಿದ್ದಾರೆ. ಏತಕ್ಕೆ ಇವರ ಮೇಲೆ ಆಕ್ಷನ್ ತೆಗೆದುಕೊಂಡಿಲ್ಲ ಎಂದು ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

೧೨–೮೦ ಮಧ್ಯಾಹ್ನ

ಶ್ರೀ ಜಿ. ಪಿಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಅಲ್ಲಿ ಜಿಂಕ್ ಇರಬಹುದು, ಮುಕ್ಯರಿ ಇರಬಹುದು ಇನ್ನುಳಿದ ಯಾವುದೇ ರೀತಿಯ ಕಂಟೆಂಟ್ಸ್ ಇರಬಹುದು, ಅದು ಸಣ್ಣ ಪ್ರಮಾಣದಲ್ಲಿ ಇದ್ದರೆ ಯಾವ ಜನರಿಗೂ ಯಾವುದೇ ರೀತಿಯ ಹಾನಿಯಾಗುವುದಿಲ್ಲ. ಆದ್ದರಿಂದ ನಾವು ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅಲ್ಲಿಂದ ಬರತಕ್ಕಂಥ ರಾಸಾಯನಿಕ ವಸ್ತುಗಳಾಗಿರಬಹುದು, ಅದರಿಂದ ಯಾವುದೇ ರೀತಿಯ ವಿಷ ವಸ್ತುಗಳು ಬರದೇ ಇರುವಾಗ ನಾವು ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದರಲ್ಲಿ ಟೆಕ್ನಿಕಲ್ ಟರ್ಮಿನಾಲಜಿ ಇರುತ್ತದೆ. ಇದರಲ್ಲಿ ಪಾಯಿಂಟ್ ಜೀರೋ ಒಂದು ಪರ್ಸೆಂಟ್ ಇದ್ದರೆ ಹಾನಿಯಾಗುವುದಿಲ್ಲ, ಒಂದು ಪರ್ಸೆಂಟ್‌ನಷ್ಟು ಇದ್ದರೆ ಹಾನಿಯಾಗುತ್ತದೆ ಎಂದು ತಜ್ಞರು ಮತ್ತು ಕೆಮಿಕಲ್ ಇಂಜನೀಯರ್ಸ್ ಅನ್ನು ಕರೆದು ಪರೀಕ್ಷೆ ಮಾಡಿಸಿದಾಗ ಹೇಳಿದ್ದಾರೆ. ಜಿಂಕ್ ಯಾವುದೇ ಕಾರಣದಿಂದ ಎಮಿಟ್ ಆಗುವುದಿಲ್ಲ ಇಲ್ಲಿಯವರೆವಿಗೂ ಸರ್ಕಾರದ ಗಮನಕ್ಕೆ ಆ ವಿಷಯ ಬಂದಿಲ್ಲ. ಆ ರೀತಿ ಏನಾದರೂ ಆದರೆ ತಕ್ಷಣ

ಆದನ್ನು ನಿಲ್ಲಿಸಲಾಗುವುದು, ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ ಕಾರವಾರ ಜಿಲ್ಲೆಯಲ್ಲಿ ಬಹಳ ಮುಖ್ಯವಾದ ಒಂದು ಕೆಮಿಕಲ್ ಇಂಡಸ್ಟ್ರಿ ಇತ್ತು. ಅಲ್ಲಿ ಆ ರೀತಿ ಆಯಿತು ಎಂದ ತಕ್ಷಣ ಸರ್ಕಾರ ಅಲ್ಲಿಗೆ ಪೋಲೀಸಿನವರನ್ನು ಕಳುಹಿಸಿಕೊಟ್ಟು ಸ್ಟಾಪ್ ಮಾಡಿಸಿದ್ದೇವೆ. ಮಾನ್ಯ ಸದಸ್ಯರ ಸಲಹೆ ಸರ್ಕಾರ ಗಮನಿಸಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ, —ಮಾನ್ಯ ಮಂತ್ರಿಗಳು ಬಹಳ ವ್ಯವಸ್ಥಿತ ರೀತಿಯಲ್ಲಿ ಹೇಳಿದರು ಪರಿಸರ ಮಾಲಿನ್ಯವನ್ನು ನಾವು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ನಮ್ಮ ತುರುವೇಕೆರೆ ತಾಲ್ಲೂಕಿನಲ್ಲಿ ಅಮ್ಮಸಂದ್ರ ಡೈಮೆಂಡ್ ಫ್ಯಾಕ್ಟರಿ ಇದೆ. ಅಲ್ಲಿಂದ ಸುಮಾರು ೧೦-೧೨ ಕಿಲೋಮೀಟರ್‌ವರೆವಿಗೂ ದೂಳು ಬರುತ್ತದೆ. ಆ ದೂಳು ಕಾಲು ಇಂಚು ಮಂರಗಳ ಎಲೆಗಳ ಮೇಲೆ ಕುಳಿತುಕೊಂಡಿರುತ್ತದೆ, ಈ ಬಗ್ಗೆ ಏಕ್ಸ್‌ಪರ್ಟ್ಸ್ ಹೇಳಿದ್ದಾರೆ ಇದು ಒಂದು ರೀತಿಯಲ್ಲಿ ಪರ್ಟಿಲೈಜರ್ ಇದ್ದ ಹಾಗೆ ಎಂದು; ಈ ರೀತಿ ದೂಳು ಇರುವುದರಿಂದ ಫೋಟಾಸಿಸಿಸ್‌ಗೆ ರೀ ಆಕ್ಷನ್ ಆಗುತ್ತದೆ. ಈ ದೂಳಿನಿಂದ ತೆಂಗಿನ ಮರಗಳು ಒಣಗಿ ಹೋಗುವಂತಹ ಪರಿಸ್ಥಿತಿ ಬಂದಿದೆ. ಸರ್ಕಾರಕ್ಕೆ ರೈತರು ದೂರು ಕೊಟ್ಟಿದ್ದಾರೆ. ಮನವಿ ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು. ದೂಳನ್ನು ತಡೆಗಟ್ಟಲು ಒಂದು ಹೊಸ ಟೆಕ್ನಾಲಜಿ ಬಂದಿದೆ, ಆ ಟೆಕ್ನಾಲಜಿಯನ್ನು ಅಳವಡಿಸಿಕೊಳ್ಳಿ ಎಂದರೆ, ಅದಕ್ಕೆ ಸಾಕಷ್ಟು ಹಣ ಬೇಕಾಗುತ್ತದೆ ಎಂದು ಅವರು ಆ ಟೆಕ್ನಾಲಜಿಯನ್ನು ಅಳವಡಿಸಿಕೊಂಡಿಲ್ಲ. ಇದರಿಂದ ಸಾವಿರಾರು ರೈತರು ಹಾಳಾಗುತ್ತಿದ್ದಾರೆ, ಈ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ,

ಶ್ರೀ ಜೆ. ಹೆಚ್. ಪಟೇಲ್. —ಧೂಳು ತುಂಬಿ ರೈತರ ಮರಗಿಡಗಳನ್ನು ಹಾಳು ಮಾಡುವುದಕ್ಕೆ ನಾವು ಸಿಮೆಂಟ್ ಫಾಕ್ಟರಿಗೆ ಲೈಸೆನ್ಸ್ ಕೊಡಲಿಲ್ಲ. ರಾಜ್ಯದಲ್ಲಾಗಲಿ, ರಾಷ್ಟ್ರದಲ್ಲಾಗಲಿ ಉದ್ದಿಮೆಗಳನ್ನು ಸ್ಥಾಪನೆ ಮಾಡುವಾಗ ಇವೆಲ್ಲವನ್ನೂ ಆಲೋಚನೆ ಮಾಡಿರುತ್ತಾರೆ. ಕೆಲವಕ್ಕೆ ಪರಿಹಾರ ಇದೆ, ಕೆಲವಕ್ಕೆ ಪರಿಹಾರ ಇಲ್ಲ. ಧೂಳು ಬರುತ್ತದೆ, ಬರತಕ್ಕಂಥ ಧೂಳನ್ನು ತಡೆಗಟ್ಟುವುದಕ್ಕೆ ಇತ್ತೀಚಿಗೆ ಡ್ರೈ ಟೆಕ್ನಾಲಜಿ, ಬಂದಿದೆ, ಮತ್ತು ವೆಟ್ ಟೆಕ್ನಾಲಜಿ ಇದೆ. ಆ ಬಗ್ಗೆ ಇಲ್ಲಿ ಎಕ್ಸ್‌ಪ್ಲೆನೇಶನ್ ಬೇಕಾಗಿಲ್ಲ. ಬರತಕ್ಕಂಥ ಧೂಳಿನಿಂದ ತೆಂಗಿನ ಸಸಿಗಳಿಗೆ ಏನೂ ತೊಂದರೆಯಾಗುವುದಿಲ್ಲ ಇನ್ನೂ ಸಣ್ಣ ಸಣ್ಣ ತರಕಾರಿ ಬೆಳೆಗೆ ಹಾನಿಯಾಗುತ್ತದೆಂದು ಗೊತ್ತಾಗಿದೆ, ತೆಂಗಿನ ಸಸಿಗಳು ಹಾಳಾಗುತ್ತಿವೆ ಎಂದು ಹೊಸದುರ್ಗ, ಗುಲ್ಬರ್ಗ ಈ ಭಾಗಗಳಿಂದ ರೈತರು ದೂರು ಮಾಡುತ್ತಿದ್ದಾರೆ. ಮತ್ತು ಮರಗಳ ಎಲೆಗಳ ಮೇಲೆ ಧೂಳು ತುಂಬಿದರೆ ಅದು ಪರ್ಟಿಲೈಜರ್ ಆಗುತ್ತದೆಂದು ಯಾರೂ ನಮಗೆ ಓಪಿನೀಯನ್ ಕೊಟ್ಟಿಲ್ಲ. ಇವುಗಳ ಗ್ರೋತ್ ಕೆಡುವುದಿಲ್ಲ. ಆದರೂ ಮಾನ್ಯ ಸದಸ್ಯರ ಸಲಹೆಯನ್ನು ಪುನರ್ ಪರಿಶೀಲನೆ ಮಾಡುತ್ತೇನೆ.

ನಂಜನಗೂಡು ಉಪ ವಿಭಾಗದಲ್ಲಿರುವ ಕರೀಕಲ್ಲುಗಳನ್ನು ಸಾಗಿಸುವುದು

೧೨೨೦. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ)—ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡು ಕಂದಾಯ ಉಪ ವಿಭಾಗದಲ್ಲಿರುವ ಕರೀಕಲ್ಲುಗಳನ್ನು ಖಾಸಗಿಯವರು ಸಾಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಈವರೆಗೆ ಕೈಗೊಂಡಿರುವ ಕ್ರಮಗಳೇನು ?

ಇ) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಕಲ್ಲು ಸಾಗಾಣಿಕೆ ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು ?

ಈ) ಈ ಅಕ್ರಮ ಸಾಗಣೆಯಿಂದ ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು ಮತ್ತು ಕೆಲವು ಅಧಿಕಾರಿಗಳು ಸ್ವಾಧೀನಪಡಿಸಿಕೊಂಡಿದ್ದ ಕಲ್ಲುಗಳ ಬಗ್ಗೆ ವಿಲೇವಾರಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ಹಾಗೂ ಇದರಿಂದ ಬಂದಿರುವ ಆದಾಯವೆಷ್ಟು ?